ಕರೆಯಲು ವಿಫಲವಾದಲ್ಲಿ ತಾಲ್ಲೂಕುಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಗ್ರಾಮ ಸಭೆಯನ್ನು ಕರೆಯತಕ್ಕದ್ದು.

ಆ) ಉದ್ಭವಿಸುವುದಿಲ್ಲ.

ಇ) ಗ್ರಾಮ ಸಭೆಯ ನಡವಳಿಯನ್ನು ವಿಡಿಯೋ ಚಿತ್ರೀಕರಣ ಛಾಯಾಚಿತ್ರ ತೆಗೆಯಲು ಮಾರ್ಗಸೂಚಿ ನೀಡಲಾಗಿದೆ. ಹೌದು. ಅನ್ಯಾಯ ತಡೆಗಟ್ಟಲು ಸಾಧ್ಯವಾಗುತ್ತದೆ.

ಈ) ಇಲ್ಲ.

ಅನುದಾನ ಮಂಜೂರಾತಿ

4674 - ಶ್ರೀ ಪಿ.ಹೆಚ್. ಪೂಜಾರ್ (ಬಾಗಲಕೋಟೆ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸರ್ಕಾರದ ಆದೇಶ : ಇಡಿ 96 ಎಂ.ಎಚ್.ಎಸ 87, ತಾ: 15-10-1987 ರನ್ವಯ ಬಿಜಾಪುರ ಜಿಲ್ಲಾ ಪಂಚಾಯತ್ ಇವರ ಠರಾವು 27: 88-89, ದಿನಾಂಕ : 8-6-1989 ರಂದು 31 ಪ್ರೌಢಶಾಲೆಗಳಿಗೆ ಅನುಮತಿ ನೀಡಿದ್ದು ನಿಜವೇ?*

ಆ) *ಹಾಗಿದ್ದಲ್ಲಿ ಅವುಗಳಿಗೆ ಇನ್ನೂವರೆಗೂ ಅನುದಾನಿತ ಶಾಲೆಯೆಂದು ಮಾನ್ಯತೆ ನೀಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಹಾಗಿದ್ದಲ್ಲಿ ಅನುದಾನ ನೀಡಲು ಸರ್ಕಾರ ಕೈಗೊಂಡ ಕ್ರಮಗಳು ಯಾವುವು (ವಿವರ ನೀಡುವುದು)?*

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ನಿಜ.

ಆ) 1-6-87ರ ನಂತರ ಪ್ರಾರಂಭವಾದ ಎಲ್ಲಾ ಶಾಲೆಗಳು ಶಾಶ್ವತ ಅನುದಾನ ರಹಿತ ಶಾಲೆಗಳೆಂದು ಘೋಷಿಸಲ್ಪಟ್ಟಿದೆ.

ಇ) ಉದ್ಭವಿಸುವುದಿಲ್ಲ.

ಗ್ರಾಮೀಣ ರಸ್ತೆಗಳಿಗೆ ಒಂದು ಕೋಟ ಹಣ ಬಿಡುಗಡೆ

4675 - ಶ್ರೀ ಪಾಟೀಲ್ ಸಿದ್ದಲಿಂಗನಗೌಡ ಸಿದ್ದನಗೌಡ (ಮುಂಡರಗಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸನ್ಮಾನ್ಯ ಪ್ರಧಾನಮಂತ್ರಿಗಳವರ ಗ್ರಾಮೀಣ ರಸ್ತೆಗಳಿಗೆ ಒಂದು ಕೋಟಿ ಹಣ ತಾಲ್ಲೂಕುವಾರು ಬಿಡುಗಡೆ ಆಗಿದೆಯೇ?*